**<u>ದಿನಾಂಕ: 24.08.2026 ರಆದೇಶನ್ವಯ ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

<u>ಮುಂದುವರೆದ ಮುಖ್ಯ ವಿಚಾರಣೆ : ಅರ್ಜಿದಾರ ಪರ ಶ್ರೀ. ಆರ್ ಯು ಪಿ ವಕೀಲರಿಂದ</u>

| | |
|---|---|
| ನಿ ಪಿ 7 | ಸ್ಥಳ ಪಂಚನಾಮೆ ನಾಕಶೆ ಹಾಗೂ ಫೋಟೋ ಸಹಿತ |
| ನಿ ಪಿ 8 | ವಾಹನ ಜಪ್ತು ಪಂಚನಾಮೆ ಫೋಟೋ ಸಹಿತ |
| ನಿ ಪಿ 9 | ಮಾಕ್ಸ ಆಸ್ಪತ್ರೆಯ ಡಿಸ್ ಚಾರ್ಜ ಸಮರಿ |
| ನಿ ಪಿ 10 | 15 ವೈದ್ಯಕೀಯ ಬಿಲ್ಲುಗಳನ್ನು ಒಟ್ಟಾಗಿ |
| ನಿ ಪಿ 11 | ಲ್ಯಾಬ ವರದಿಯನ್ನು |

<u>ಪಾಟೀ ಸವಾಲುಃ 2 ನೇ ಎದುರುದಾರ ಪರ ಶ್ರೀ. ಎಸ್ ಟಿ ಕೆ ವಕೀಲರಿಂದಃ</u>

2. ಸದರಿ ಅಪಘಾತ ನಡೆದ ದಿನ ನಾನು ಉದ್ರಿ ಗ್ರಾಮದಿಂದ ಹಾನಗಲ್ ಕಡೆಗೆ ಬರುತ್ತಿದ್ದೆ. ಸದರಿ ದಿನ ನಾನು ಉಪಗಡ್ಡೆ ಗ್ರಾಮದ ಶಾಲೆಯ ಬಳಿ ನಿಂತುಕೊಂಡಿದ್ದೆ. ಸದರಿ ದಿನ ನಾನು ಬಸ್ ಸ್ಟ್ಯಾಂಡ ಬಳಿ ನಿಂತು ಕೊಂಡಿದ್ದೆ. ಸದರಿ ಸ್ಥಳದಲ್ಲಿ ದೊಡ್ಡ ಬಸ್ ನಿಲ್ದಾಣ ಇತ್ತು. ಸದರಿ ಬಸ್ ನಿಲ್ದಾಣದ ಬಳಿ ಸಾಕಷ್ಟು ಅಂಗಡಿಗಳು ಇವೆ ಎಂದರೆ ಸಾಕ್ಷಿ ಒಂದೇ ಅಂಗಡಿ ಇದೆ ಎನ್ನುತ್ತಾರೆ. ಸದರಿ ಸ್ಥಳದಲ್ಲಿ ಬಸ್ ನಿಲ್ದಾಣ ಇರುವುದರಿಂದ ಸಾಕಷ್ಟು ಜನ ಓಡಾಡುತ್ತಿರುತ್ತಾರೆ ಎಂದರೆ ಸರಿಯಲ್ಲ. ಸದರಿ ಅಪಘಾತದ ಸಮಯದಲ್ಲಿ ನಾನು ಶಾಲೆಯ ಬಳಿ ನಿಂತುಕೊಂಡಿದ್ದೆ. ಸದರಿ ಸ್ಥಳದಲಲ್ ನಾನು ಹಾಗೂ ನನ್ನ ಅಣ್ಣ ನಿಂತುಕೊಂಡಿದ್ದೆವು. ಸದರಿ ಸಮಯದಲ್ಲಿ ಶಿವಮೊಗ್ಗ ಕಡೆಯಿಂದ ಹಾನಗಲ್ ಕಡೆಗೆ ಹೋಗಲು ಬಸ್ ಬರುತ್ತಿದ್ದರಿಂದ ನಾವು ಬಸ್ ನಿಲ್ದಾಣದ ಕಡೆಗೆ ಹೋದೆವು ಎಂದರೆ ಸರಿ. ಸದರಿ ಬಸ್ ನಿಲ್ದಾಣದ ಕಡೆಗೆ ನಾವು ರಸ್ತೆಯ ಮೇಲೆ ಸಂಚರಿಸುವ ವಾಹನಗಳನ್ನು ಗಮನಿಸದೇ ಹೋದೆವು ಎಂದರೆ ಸರಿಯಲ್ಲ. ಸಾಕ್ಷಿ ಮುಂದುವರೆದು ರಸ್ತೆಯ ಎರಡು ಬದಿಗೆ ನೋಡಿ ಹೋದೆವು ಎನ್ನುತ್ತಾರೆ. ನಾವು ರಸ್ತೆಯ ಮಧ್ಯ ಭಾಗಕ್ಕೆ ಹೋದಾಗ ಸದರಿ ಘಟನೆ ಆಗಿತ್ತು ಎಂದರೆ ಸರಿಯಲ್ಲ. ಸದರಿ ಅಪಘಾತದಲ್ಲಿ ನನ್ನ ಅಣ್ಣನಿಗೆ ಯಾವುದೇ ಗಾಯ ಆಗಲಿಲ್ಲ. ಸದರಿ ಅಪಘಾತ ನಮ್ಮ ತಪ್ಪಿನಿಂದ ಹಾಗೂ ನಾವು ಬರುತ್ತಿದ್ದ ಬಸ್ ನ್ನು ಗಮನಿಸದೇ ಹೋಗಿದ್ದರಿಂದ ಆಗಿದೆ ಎಂದರೆ ಸರಿಯಲ್ಲ.

3. ಘಟನೆ ಆದ ತಕ್ಷಣ ನನ್ನನ್ನು ಮೊದಲು ಸೊರಬ ಸರಕಾರಿ ಆಸ್ಪತ್ರೆಗೆ ಚಿಕಿತ್ಸೆಗೆ ದಾಖಲಿಸಿ ಅಲ್ಲಿಂದ ಶಿವಮೊಗ್ಗದ ಮಾಕ್ಸ ಆಸ್ಪತ್ರೆಗೆ ಹೆಚ್ಚಿನ ಚಿಕಿತ್ಸೆಗಾಗಿ ದಾಖಲಿಸಲಾಯಿತು. ಸದರಿ ಅಪಘಾತದಲ್ಲಿ ನನ್ನ ತಲೆಗೆ ಮತ್ತು ಕಿವಿಗೆ ಗಾಯವಾಗಿತ್ತು. ಅದನ್ನು ಹೊರತು ಪಡಿಸಿ ಬೇರೆ

ಯಾವುದೇ ಗಾಯ ಆಗಿರಲಿಲ್ಲ. ನನಗೆ ಆದ ಗಾಯಗಳು ಸಾದಾ ಸ್ವರೂಪದ ಗಾಯಗಳು ಆಗಿದ್ದರಿಂದ ಸದರಿ ಎರಡು ಆಸ್ಪತ್ರೆಗಳಲ್ಲಿ ನನಗೆ ಪ್ರಥಮ ಚಿಕಿತ್ಸೆಯನ್ನು ನೀಡಿ ಕಳುಹಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಹಾಜರು ಪಡಿಸಿದ ವೈದ್ಯಕೀಯ ದಾಖಲೆಗಳು ಹೆಚ್ಚಿನ ಪರಿಹಾರ ಪಡೆಯುವ ಉದ್ದೇಶದಿಂದ ಖೊಟ್ಟಿಯಾಗಿ ಸೃಷ್ಟಿಸಿ ಹಾಜರು ಪಡಿಸಿರುತ್ತೇನೆಂದರೆ ಸರಿಯಲ್ಲ. ಸದರಿ ಅಪಘಾತದಿಂದಾಗಿ ನನಗೆ ಸಂಪೂರ್ಣ ಅಂಗನ್ಯೂನ್ಯತೆ ಉಂಟಾಗಿದೆ ಎಂದು ಬರೆಯಿಸಿದ್ದು ಅದಕ್ಕೆ ಸಂಬಂದಿಸಿದಂತೆ ಯಾವುದೇ ಅಂಗನ್ಯೂನತಾ ಪ್ರಮಾಣ ಪತ್ರವನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ.

4. ನಾನು ಒಂದೂವರೆ ಎಕರೆ ಕೃಷಿ ಜಮೀನು ಹೊಂದಿರುತ್ತೇನೆ. ಸದರಿ ಜಮೀನಿನ ಉತಾರನ್ನು ನಾನು ಹಾಜರು ಪಡಿಸಿಲ್ಲ. ನನಗೆ ಆದ ಗಾಯಗಳಿಗೆ ನಾನು 2 ಲಕ್ಷ ವ್ಯಯಿಸಿದ್ದು ಭವಿಷ್ಯತ್ ಚಿಕಿತ್ಸೆಗೆ 1 ಲಕ್ಷ ರೂಪಾಯಿ ಬೇಕಾಗುತ್ತದೆ ಎಂದು ತೋರಿಸುವ ಯಾವುದೇ ದಾಖಲೆಗಳನ್ನು ನಾನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ನಾನು ತಿಂಗಳಿಗೆ 30 ಸಾವಿರ ಸಂಪಾದಿಸುತ್ತಿದ್ದೆ ಎಂದು ತೋರಿಸುವ ಯಾವುದೇ ದಾಖಲೆಗಳನ್ನು ಹಾಜರು ಪಡಿಸಿಲ್ಲ ಎಂದರೆ ಸರಿಯಲ್ಲ. ಸದರಿ ಅಪಘಾತ ನಾನು ಬರುವ ಯಾವುದೇ ವಾಹನಗಳನ್ನು ಗಮನಿಸದೇ ರಸ್ತೆ ದಾಟಲು ಪ್ರಯತ್ನಿಸಿದ್ದರಿಂದ ನನ್ನ ತಪ್ಪಿನಿಂದ ಅಪಘಾತ ವಾಗಿದೆ ಎಂದರೆ ಸರಿಯಲ್ಲ. ಆದ್ದರಿಂದ 2 ನೇ ಎದುರುದಾರರು ಪರಿಹಾರ ಕೊಡಲು ಬಾಧ್ಯಸ್ಥರಲ್ಲ ಎಂದರೆ ಸರಿಯಲ್ಲ.

<u>: ಮರುವಿಚಾರಣೆ : ಇಲ್ಲ.</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ನ. ಸ. ಓ. ಹೇ. ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ.

**Sd/-**

**1 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು**
**ಹಾಗೂ ಜೆ ಎಂ ಎಫ್ ಸಿ ಹಾನಗಲ್**